# ಕುವೆಂಪು ವಿಶ್ವವಿದ್ಯಾಲಯ

## *ವಿದ್ಯಾವಿಷಯಕ ಪರಿಷತ್ ಸಮಿತಿ*

## ಸಭೆಯ ನಡಾವಳಿಗಳು

## ಸಭಾ ದಿನಾಂಕ : 31-03-2022

ಪ್ರಾಧಿಕಾರಗಳ ವಿಭಾಗ

*ಜ್ಞಾನ ಸಹ್ಯಾದ್ರಿ, ಶಂಕರಘಟ್ಟ* 577 451, *ಶಿವಮೊಗ್ಗ ಜಿಲ್ಲೆ.*

12/5/22

ಫ್ಯಾಕ್ಸ್: 08282–256262
ಇ-ಮೇಲ್: drsyndicateku@gmail.com

08282–256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ– 577 451

ಸಂಖ್ಯೆ: ಕುವಿ:ಯುಎಟಿ–1:ವ.ಸ.01–22: 56 :2022–23

ದಿನಾಂಕ:10–05–2022

ಮಾನ್ಯರೆ,

ವಿಷಯ:ದಿನಾಂಕ:31–03–2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು– ಅಧ್ಯಾಯ–IIರ ಪ್ರಕರಣ– 17ರನ್ವಯ ದಿನಾಂಕ:31–03–2022ರಂದು ವಿಶ್ವವಿದ್ಯಾಲಯದ **"ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"**ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು– ಅಧ್ಯಾಯ–IIರ ಪ್ರಕರಣ–17ರ ಕಂಡಿಕೆ (2) ರ ಪ್ರಕಾರ ಸದರಿ ನಡಾವಳಿಗಳನ್ನು ಕಳುಹಿಸಿದ 21 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ**

ಗೆ,

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

ಪ್ರತಿಗಳು:–

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು,ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
10) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
11) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
12) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಬಿ.ಹೆಚ್ ರಸ್ತೆ ಕಡೂರು.
13) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು. ಕುವೆಂಪು ವಿಶ್ವವಿದ್ಯಾಲಯ
14) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
15) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ.
17) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:31-03-2022 ರಂದು ಗುರುವಾರ ಪೂರ್ವಾಹ್ನ 11.00 ಗಂಟೆಗೆ ವಿಶ್ವವಿದ್ಯಾಲಯದ **"ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"ದಲ್ಲಿ** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಬಿ.ಪಿ ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 3. | ಪ್ರೊ. ನವೀನ್ ಕುಮಾರ್ ಎಸ್.ಕೆ. ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ. ರೇವಣ್‌ಕರ್ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ವಿನಯ ಕುಮಾರ್ ಶೆಟ್ಟಿ ಪ್ರಾಂಶುಪಾಲರು | ಸದಸ್ಯರು |
| 6. | ಡಾ. ವಿಷ್ಣುಮೂರ್ತಿ ಕೆ.ಎ. ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ರಾಜಶೇಖರ ಪಿ.ಬಿ. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀಮತಿ ಭಾರತಿ ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ನಟೇಶ ಎಸ್.ಎಂ. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಬಿ.ಸಿ. ಬಸವರಾಜಪ್ಪ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಮಹಾಲಿಂಗಪ್ಪ ಈ. ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಎಂ. ಸ್ವಾಮಿ ಪ್ರಾಂಶುಪಾಲರು | ಸದಸ್ಯರು |
| 13. | ಡಾ. ರಾಮಚಂದ್ರ ದೇವರು ಹೆಗಡೆ ಪ್ರಾಂಶುಪಾಲರು | ಸದಸ್ಯರು |
| 14. | ಶ್ರೀ ಚಂದ್ರಶೇಖರ ಎಸ್. | ಸದಸ್ಯರು |
| 15. | ಶ್ರೀ ಎಂ.ಎ. ರಮೇಶ್ ಹೆಗಡೆ | ಸದಸ್ಯರು |
| 16. | ಶ್ರೀಮತಿ ಗೀತಾಂಜಲಿ | ಸದಸ್ಯರು |
| 17. | ಶ್ರೀ ಕುಮಾರೇಗೌಡ | ಸದಸ್ಯರು |
| 18. | ಶ್ರೀಮತಿ ಎಸ್.ಬಿ. ಅನುಪಮ | ಸದಸ್ಯರು |
| 19. | ಶ್ರೀ ಮನೋಜ್ ಸಲ್ಡಾನಾ | ಸದಸ್ಯರು |
| 20. | ಡಾ. ರವಿಕಿರಣ ಹೆಚ್.ಕೆ. | ಸದಸ್ಯರು |
| 21. | ಶ್ರೀ ಶಿವಣ್ಣ ಪಿ. | ಸದಸ್ಯರು |
| 22. | ಡಾ. ನರಸಿಂಹಮೂರ್ತಿ ಎಸ್.ಕೆ., ಪ್ರಾಧ್ಯಾಪಕರು | ಸದಸ್ಯರು |
| 23. | ಡಾ. ಎಸ್. ಚಂದ್ರಶೇಖರ್, ಪ್ರಾಧ್ಯಾಪಕರು | ಸದಸ್ಯರು |
| 24. | ಡಾ. ಪದ್ಮಮ್ಮ ಎಸ್. ಪ್ರಾಧ್ಯಾಪಕರು | ಸದಸ್ಯರು |
| 25. | ಡಾ. ಆರ್ತೋಬ ನಾಯಕ ವೈ., ಪ್ರಾಧ್ಯಾಪಕರು | ಸದಸ್ಯರು |
| 26. | ಡಾ. ಕೆ.ಎಂ. ಮಹಾದೇವನ್ ಪ್ರಾಧ್ಯಾಪಕರು | ಸದಸ್ಯರು |
| 27. | ಪ್ರೊ. ರಿಯಾಜ್ ಮಹಮೂದ್ ಡೀನರು,, ವಿಜ್ಞಾನ ನಿಕಾಯ | ಸದಸ್ಯರು |
| 28. | ಪ್ರೊ. ವೆಂಕಟೇಶ್ ಎಸ್, ಡೀನರು,, ವಾಣಿಜ್ಯ ನಿಕಾಯ | ಸದಸ್ಯರು |
| 29. | ಡಾ. ಗೀತಾ ಸಿ., ಡೀನರು,, ಶಿಕ್ಷಣ ನಿಕಾಯ | ಸದಸ್ಯರು |
| 30. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 31. | ಪ್ರೊ. ಹೆಚ್.ಎಸ್. ಜಯಣ್ಣ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, | ಸದಸ್ಯರು |
| 32. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 33. | ಡಾ. ಬಿರಾದರ್ ಬಿ.ಎಸ್., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 34. | ಡಾ. ಎನ್.ಡಿ. ವಿರೂಪಾಕ್ಷ (ಪ್ರಭಾರ), ನಿರ್ದೇಶಕರು, ದೈಹಿಕ ಶಿಕ್ಷಣ | ಸದಸ್ಯರು |
| 35. | ಶ್ರೀ ಎಸ್. ರಾಮಕೃಷ್ಣ , ಹಣಕಾಸು ಅಧಿಕಾರಿಗಳು | ಸದಸ್ಯರು |
| 36. | ಪ್ರೊ. ಹೆಚ್.ಎಸ್. ಜಯಣ್ಣ, ನಿರ್ದೇಶಕರು ಐ.ಕ್ಯೂ.ಎ.ಸಿ | ವಿಶೇಷ ಆಹ್ವಾನಿತರು |
| 37. | ಡಾ. ಬಿರಾದರ್ ಬಿ.ಎಸ್., ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ ಆಹ್ವಾನಿತರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ಶ್ರೀ ಎಸ್. ರುದ್ರೇಗೌಡ, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ | ಸದಸ್ಯರು |
| 3. | ಡಾ. ಎಂ.ಜಿ. ಉಮಾಶಂಕರ್ ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀಮತಿ ಮಮತಾ ಸಾಲಿ | ಸದಸ್ಯರು |
| 5. | ಪ್ರೊ. ಯೋಗೀಶ್ ಎಸ್.ಎನ್.. ಡೀನರು,, ಕಲಾನಿಕಾಯ | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರಿಗೆ ಹಾಗೂ ನೂತನವಾಗಿ ನಾಮನಿರ್ದೇಶನಗೊಂಡ ಈ ಕೆಳಕಂಡ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ವಿದ್ಯಾವಿಷಯಕ ಪರಿಷತ್ ಸಭೆಯ ಪರವಾಗಿ ಆತ್ಮೀಯವಾಗಿ ಸ್ವಾಗತ ಕೋರಿದರು.

1. ಪ್ರೊ. ನವೀನ್ ಕುಮಾರ್ ಎಸ್.ಕೆ. ಕುಲಸಚಿವರು(ಮೌಲ್ಯಮಾಪನ).
2. ಡಾ. ಗೀತಾ ಸಿ., ಡೀನರು, ಶಿಕ್ಷಣ ನಿಕಾಯ.
3. ಪ್ರೊ. ವೆಂಕಟೇಶ್ ಎಸ್, ಡೀನರು,, ವಾಣಿಜ್ಯ ನಿಕಾಯ.

ಸಭೆಯ ಪ್ರಾರಂಭದಲ್ಲಿ ಮಾತನಾಡಿದ ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದಲ್ಲಿ ಕೈಗೊಳ್ಳಲಾಗಿರುವ ವಿವಿಧ ಶೈಕ್ಷಣಿಕ ಚಟುವಟಿಕೆಗಳು ಮತ್ತು ಇನ್ನಿತರೇ ಕಾರ್ಯಕ್ರಮಗಳ ಕುರಿತು ಸಭೆಗೆ ವಿವರಿಸಿದರು. ಜೊತೆಗೆ ವಿಶ್ವವಿದ್ಯಾನಿಲಯದಲ್ಲಿ 2021-22ನೇ ಸಾಲಿನಲ್ಲಿ ಎಂ.ಎಸ್ಸಿ ಆಹಾರ ತಂತ್ರಜ್ಞಾನ (M.Sc Food Technology) ಕೋರ್ಸ್ ಹೊಸದಾಗಿ ಆರಂಭಿಸಲಾಗಿದೆ. ಮುಂದುವರೆದು ಸ್ಕೂಲ್ ಆಫ್ ಇಂಜಿನಿಯರಿಂಗ್ ವ್ಯಾಪ್ತಿಯಲ್ಲಿ ವಿವಿಧ ವೃತ್ತಿಪರ ಹಾಗೂ ಇನ್ನಿತರ Self Finance Course ಗಳನ್ನು ಪ್ರಾರಂಭಿಸುವ ಬಗ್ಗೆ ಚಿಂತನೆ ನಡೆದಿದ್ದು, ಈ ಮೂಲಕ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದ ಕ್ರೋಢಿಕರಣ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಈ ಕುರಿತು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕುಲಸಚಿವ(ಪರೀಕ್ಷಾಂಗ)ರವರು ಈ ಬಗ್ಗೆ ಸಭೆಗೆ ವಿವರಣೆ ನೀಡಿದರು.

ವಿದ್ಯಾವಿಷಯಕ ಪರಿಷತ್ ಸಭೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಶೇ.100ರಷ್ಟು ಮನ್ನಾ ಮಾಡುವಂತೆ ಧರಣಿ ನಡೆಸಿದ ಹಿನ್ನಲೆಯಲ್ಲಿ ಈ ವಿಷಯದ ಕುರಿತು ಸದಸ್ಯರು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ಈ ಬಗ್ಗೆ ಮಾತನಾಡಿದ ಕುಲಸಚಿವ(ಪರೀಕ್ಷಾಂಗ)ರವರು ಕೊರೋನಾ ಪರಿಸ್ಥಿತಿ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಪಾವತಿಸಬೇಕಾದ ಪರೀಕ್ಷಾ ಶುಲ್ಕದಲ್ಲಿ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಶೇಕಡ 50ರಷ್ಟು ವಿನಾಯಿತಿ ನೀಡಿ ಸರ್ಕಾರವು ಸುತ್ತೋಲೆ ಹೊರಡಿಸಿದ್ದರಿಂದ ಅದರಂತೆ ಕ್ರಮ ಕೈಗೊಳ್ಳಲಾಯಿತು. ಆದರೆ, ಸರ್ಕಾರದ ಸುತ್ತೋಲೆ ಬರುವ ಮುನ್ನವೇ ಪರೀಕ್ಷಾ ಶುಲ್ಕ ಪಾವತಿಯ ಅಧಿಸೂಚನೆ ಹೊರಡಿಸಿದ್ದರಿಂದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರು. ಆದ್ದರಿಂದ ವಿದ್ಯಾರ್ಥಿಗಳು ಪಾವತಿಸಿದ ಪರೀಕ್ಷಾ ಶುಲ್ಕಗಳಲ್ಲಿ ಶೇಕಡಾ 50% ರಷ್ಟನ್ನು ಮುಂದಿನ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕಕ್ಕೆ (ಒಂದು ಬಾರಿ ಮಾತ್ರ) ಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರದ ಆದೇಶದನ್ವಯ ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಗೆ ತಿಳಿಸಿದರು. ಚರ್ಚೆಯಲ್ಲಿ ಪಾಲ್ಗೊಂಡ ಪ್ರೊ.ಆರ್ತೋಟಬ ನಾಯಕ.ವೈ ರವರು ಮಾತನಾಡಿ ಪರೀಕ್ಷಾ ಶುಲ್ಕ ಹೆಚ್ಚಿಸಿದ ಕ್ರಮವನ್ನು ವಿರೋಧಿಸಿದರು ಇದಕ್ಕೆ ಸದಸ್ಯರಾದ ಡಾ. ರವಿಕಿರಣ್. ಹೆಚ್.ಕೆ ಇದಕ್ಕೆ ಧ್ವನಿಗೂಡಿಸಿದರು. ಇತರ ಸದಸ್ಯರುಗಳಾದ ಪ್ರೊ. ನರಸಿಂಹಮೂರ್ತಿ ಎಸ್. ಕೆ, ಪ್ರೊ ಚಂದ್ರಶೇಖರ್, ಶ್ರೀ ಬಿ.ಸಿ.ಬಸವರಾಜಪ್ಪ ಹಾಗೂ ಪ್ರೊ. ರಿಯಾಜ್ ಮಹಮೂದ್ ಇವರುಗಳು ಮಾತನಾಡಿ ವಿದ್ಯಾರ್ಥಿಗಳ ಕೋರಿಕೆಯಂತೆ ಪರೀಕ್ಷಾ ಶುಲ್ಕ ನಿಗದಿಪಡಿಸಲು ಕೋರಿದರು.

ನಿರ್ಣಯ:ಚರ್ಚೆಯ ನಂತರ ಮಾತನಾಡಿದ ಕುಲಸಚಿವ(ಪರೀಕ್ಷಾಂಗ)ರವರು ಈ ಕುರಿತು ಸರ್ಕಾರದ ಆದೇಶಗಳು ಹಾಗೂ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಗುವುದು ಎಂದು ಹೇಳಿದರು ಹಾಗೂ ವಿದ್ಯಾರ್ಥಿಗಳ ಕೋರಿಕೆ ಹಿನ್ನೆಲೆಯಲ್ಲಿ ಅವರ ಹಿತದೃಷ್ಟಿಯಿಂದ ಪರೀಕ್ಷಾ ಶುಲ್ಕ ನಿಗದಿ ಕುರಿತು ಎಲ್ಲಾ ನಿಕಾಯಗಳ ಡೀನರುಗಳು ಮತ್ತು ಎಲ್ಲಾ ವಿಭಾಧ್ಯಾಕ್ಷರುಗಳ ಸಭೆ ಕರೆದು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ನಂತರ ಕಾರ್ಯಸೂಚಿಯಲ್ಲಿರುವಂತೆ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

**2022:ಎಸಿ-1.01:** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರನ್ವಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳಿಗೆ ಸಂಬಂಧಿಸಿದ ವರದಿ."STATUTES RELATING TO RECRUITMENT OF ASSISTANT EXECUTIVE ENGINEER IN KUVEMPU UNIVERSITY BY PROMOTION - 2020"

ನಿರ್ಣಯ: ಈ ಬಗ್ಗೆ ಮಾನ್ಯ ಕುಲಸಚಿವರು, **STATUTES RELATING TO RECRUITMENT OF ASSISTANT EXECUTIVE ENGINEER IN KUVEMPU UNIVERSITY BY PROMOTION-2020"** ಪರಿನಿಯಮವು ಘನತೆವೆತ್ತ ಕುಲಾಧಿಪತಿಗಳಿಂದ ದಿನಾಂಕ:13-10-2022ರಂದು ಅಂಕಿತಗೊಂಡಿರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಈ ಕುರಿತು ಸಭೆಯು ಅನುಮೋದನೆ ನೀಡಿತು.

**2022:ಎಸಿ-1.02 :** ಮಾನ್ಯ ಕುಲಪತಿಗಳು ಅಥವಾ ಸಿಂಡಿಕೇಟ್ ಮಂಡಿಸಿದ ವಿಷಯಗಳು

ನಿರ್ಣಯ : ಯಾವುದೂ ಇರುವುದಿಲ್ಲ.

## ಪ್ರಾಧಿಕಾರಗಳ ವಿಭಾಗ

**2022:ಎಸಿ-1.03:** 2020-21 ನೇ ಆರ್ಥಿಕ ಸಾಲಿನ 33ನೇ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು.

ನಿರ್ಣಯ : ವಿಶ್ವವಿದ್ಯಾನಿಲಯದ 2020-21ನೇ ಆರ್ಥಿಕ ಸಾಲಿನ 33ನೇ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.

**2022:ಎಸಿ-1.04 :** ದಿನಾಂಕ:18-08-2021 ರಂದು ನಡೆದ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳ ದೃಢೀಕರಣ.

ನಿರ್ಣಯ: ಚರ್ಚೆಯ ನಂತರ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2022:ಎಸಿ-1.05:** ದಿನಾಂಕ:29-10-2021 ರಂದು ನಡೆದ "ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆ"ಯ ನಡಾವಳಿಗಳ ದೃಢೀಕರಣ.

ನಿರ್ಣಯ : **ಸದಸ್ಯರಾದ ಶ್ರೀ ಮನೋಜ್ ಸಲ್ಡಾನಾರವರು ಮಾತನಾಡಿ ನಾನು ಈ ಹಿಂದೆ Start up Cell ಹಾಗೂ BASLP (B.Sc Audiology & Speech Language Pathalogy ) ಪದವಿಗಳನ್ನು ಆರಂಭಿಸುವ ಬಗ್ಗೆ ಮನವಿಯನ್ನು ಸಲ್ಲಿಸಿದ್ದರೂ ವಿಶ್ವವಿದ್ಯಾಲಯವು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಕ್ಷೇಪಿಸಿದರು. ಈ ಕುರಿತು ಮಾನ್ಯ ಕುಲಪತಿಗಳು ಮಾತನಾಡಿ BASLP (B.Sc Audiology & Speech Language Pathalogy )ಹಾಗೂ MASLP (M.Sc Audiology & Speech Language Pathalogy)ಕೋರ್ಸ್‌ಗಳು ಉತ್ತಮ ಕೋರ್ಸ್‌ಗಳಾಗಿದ್ದು ಸಭಾ ನಡಾವಳಿಯಲ್ಲಿ ಸೇರಿಸಲು ಹಾಗೂ ಸಂಬಂಧ ಪಟ್ಟ ವಿಭಾಗಗಳಿಂದ ವರದಿಯನ್ನು (Proposal) ಸಿದ್ದಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದರು, ಅಲ್ಲದೆ Hotel Management, Fire and Safety,School of Engineering ಮುಂತಾದ ಕೋರ್ಸ್‌ಗಳು ಇತರೆ ವಿಶ್ವವಿದ್ಯಾನಿಲಗಳಲ್ಲಿದ್ದು ಅದೇ ರೀತಿ ನಮ್ಮ ಕುವೆಂಪು ವಿಶ್ವವಿದ್ಯಾನಿಲಯದಲ್ಲಿಯು ಸಹ ಆರಂಭಿಸಲು ಸಾಧಕ ಭಾದಕಗಳನ್ನು ಸಲ್ಲಿಸಲು ಸಭೆಯಲ್ಲಿ ಸೂಚಿಸಿದರು.**

ಸುಧೀರ್ಘ ಚರ್ಚೆಯ ನಂತರ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು

**2022:ಎಸಿ-1.06:** ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್‌ನಿಂದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.

ಚರ್ಚೆ : **ಈ ಬಗ್ಗೆ ಸಭೆಯಲ್ಲಿ ಶ್ರೀ ಕುಮಾರೆ ಗೌಡ ಚಿಕ್ಕಮಗಳೂರು ಹಾಗೂ ಪ್ರೊ. ರಿಯಾಜ್ ಮಹಮೂದ್ ರವರುಗಳಲ್ಲಿ ಒಬ್ಬರನ್ನು ಹಣಕಾಸು ಸಮಿತಿಯ ಸದಸ್ಯರೆಂದು ನಾಮನಿರ್ದೇಶಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.**

ನಿರ್ಣಯ : ಚರ್ಚೆಯ ನಂತರ ವಿದ್ಯಾವಿಷಯಕ ಪರಿಷತ್ ಎಲ್ಲಾ ಸದಸ್ಯರ ಅಭಿಪ್ರಾಯ ಹಾಗೂ ಸಲಹೆಯಂತೆ ಶ್ರೀ ಕುಮಾರೆ ಗೌಡ ಚಿಕ್ಕಮಗಳೂರು ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಮಾನ್ಯ ಕುಲಪತಿಗಳು ಸೂಚಿಸಿದರು ಕೊನೆಗೆ ಸಭೆಯು ಒಕ್ಕೊರಲಿನಿಂದ ನಿರ್ಣಯಿಸಿತು.

## ಪರೀಕ್ಷಾ ವಿಭಾಗ

**2022:ಎಸಿ-1.07:** 2019-20ನೇ ಸಾಲಿನ ದೂರಶಿಕ್ಷಣ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಬಗ್ಗೆ.

**ಚರ್ಚೆ :** ದೂರಶಿಕ್ಷಣದ 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳ ಆಧಾರದ ಮೇಲೆ ತೇರ್ಗಡೆಗೊಳಿಸಿರುವ ವಿದ್ಯಾರ್ಥಿಗಳಿಗೆ ಪ್ರಮೋಟ್ ಮಾಡಿದ ಕ್ರಮವನ್ನು ಹಿಂಪಡೆದು, ಲಿಖಿತ ಪರೀಕ್ಷೆಗಳನ್ನು ನಡೆಸುವ ಬಗ್ಗೆ ದಿನಾಂಕ:08-03-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿರುತ್ತದೆ.

**ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ಈ ಕೆಳಕಂಡ ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ಕುಲಸಚಿವರು ಸಭೆಗೆ ವಿವರಿಸಿದರು.**

1. ಪರೀಕ್ಷೆ ಇಲ್ಲದೇ ಮುಂದಿನ ವರ್ಷಕ್ಕೆ ಪ್ರಮೋಟ್ ಮಾಡಿರುವ ನಿರ್ಣಯವನ್ನು ಹಿಂಪಡೆಯಲು ಕ್ರಮ ಕೈಗೊಳ್ಳುವುದು. ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಗೊಳಿಸಿರುವ ಕೆಲವು ಅಧ್ಯಯನ ಕೇಂದ್ರಗಳ ಫಲಿತಾಂಶವನ್ನು ಈ ಕೂಡಲೇ ರದ್ದುಪಡಿಸುವುದು.
2. 2019-20ರ ಜುಲೈ ಪ್ರಥಮ ಆವೃತ್ತಿಯ ವಿದ್ಯಾರ್ಥಿಗಳಿಗೆ ಮತ್ತು 2020-21ರ ಜನವರಿ ತಿಂಗಳಲ್ಲಿ ದ್ವಿತೀಯ ಆವೃತ್ತಿಯ ವಿದ್ಯಾರ್ಥಿಗಳಿಗೆ ನಡೆಸಬೇಕಾಗಿದ್ದ ಪ್ರಥಮ ವರ್ಷದ ಪರೀಕ್ಷೆಗಳನ್ನು ನಡೆಸದೇ ಇರುವ ಕಾರಣ ತಕ್ಷಣವೇ ಎರಡು ಆವೃತ್ತಿಯ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಪರೀಕ್ಷೆಗಳನ್ನು ನಡೆಸಬೇಕು.
3. ವಿದ್ಯಾರ್ಥಿಗಳಿಗೆ ಯಾವ ವರ್ಷವೂ ನಷ್ಟವಾಗದ ರೀತಿಯಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು ಹಾಗೂ ಪರೀಕ್ಷೆ ವೇಳಾಪಟ್ಟಿಯನ್ನು ಸಿದ್ಧಪಡಿಸಬೇಕು.
4. 2019-20ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಆವೃತ್ತಿಯ ಕೋರ್ಸ್ ಮುಕ್ತಾಯವಾಗುವ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳ ಮೂರನೇ ವರ್ಷದ ಪರೀಕ್ಷೆಗಳನ್ನು ಅಂತಿಮಗೊಳಿಸಿ ಫಲಿತಾಂಶ ಪ್ರಕಟಿಸಬೇಕು.
5. ಪ್ರಥಮ ವರ್ಷ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದೆ ನಡೆಯುವ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ವರ್ಷಗಳಿಗೆ ಸಂಬಂಧಿಸಿದಂತೆ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಬೇಕು.
6. ವಿದ್ಯಾರ್ಥಿಗಳ ದ್ವಿತೀಯ ಮತ್ತು ತೃತೀಯ ವರ್ಷದ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕವನ್ನು ಪಡೆದು ಅವರ ಪ್ರವೇಶಾತಿಯನ್ನು **ಅನುಮೋದಿಸಬೇಕು.**
7. 2019-20ನೇ ಸಾಲಿನ ವಿದ್ಯಾರ್ಥಿಗಳಿಗೆ ಒಂದು ಬಾರಿ ಪೂರ್ಣ ಪ್ರಮಾಣದ ಕ್ಯಾರಿಓವರ್ ಸಿಸ್ಟಮ್ ಕೊಡಬೇಕು.
8. ಯಾವುದೇ ಅಡಚಣೆಗಳಿಲ್ಲದೆ ವಿದ್ಯಾರ್ಥಿಗಳು ದ್ವಿತೀಯ ಮತ್ತು ತೃತ್ತೀಯ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಮತ್ತು ವಿದ್ಯಾರ್ಥಿಗಳು ಈಗಾಗಲೇ ತೃತೀಯ ವರ್ಷದ ಅಂತಿಮ ಘಟ್ಟದಲ್ಲಿ ಬಂದಿರುವುದರಿಂದ ಅವರೆಲ್ಲರೂ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳನ್ನು ತಕ್ಷಣವೇ ಬರೆಯಲು ಅನುವು ಮಾಡಿಕೊಡುವುದು.
9. ಮೇಲ್ಕಂಡ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಅವಗಾಹನೆಗೆ ತರುತ್ತಾ, ದೂರಶಿಕ್ಷಣದ 2019-20ನೇ ಸಾಲಿನ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳ ಆಧಾರದ ಮೇಲೆ ತೇರ್ಗಡೆಗೊಳಿಸಿರುವ ಕ್ರಮವನ್ನು ಹಿಂಪಡೆದು, ಲಿಖಿತ ಪರೀಕ್ಷೆಗಳನ್ನು ನಡೆಸುವ ಬಗ್ಗೆ ವಿದ್ಯಾವಿಷಯಕ ಪರಿಷತ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ **ಎಂದು ತಿಳಿಸಿದರು.**

ಈ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರಾದ ಡಾ॥ ರವಿಕಿರಣ್ ಹೆಚ್.ಕೆ ಇವರು ಸೆಪ್ಟೆಂಬರ್ 2022ರೊಳಗೆ ಬಾಕಿ ಇರುವ ಎಲ್ಲಾ ದೂರ ಶಿಕ್ಷಣ ಪರೀಕ್ಷೆಗಳನ್ನು ನಡೆಸುವಂತೆ ಸಭೆಗೆ ತಿಳಿಸಿದರು. ಸದಸ್ಯರುಗಳಾದ ಪ್ರೊ. ಕೆ. ಎಂ ಮಹಾದೇವನ್, ಪ್ರೊ. ವೈ. ಆರ್ತೋಬ ನಾಯಕ, ಪ್ರೊ. ರಿಯಾಜ್ ಮೊಹಮೂದ್ ಹಾಗೂ ಪ್ರೊ. ಎಸ್.ಕೆ ನರಸಿಂಹಮೂರ್ತಿ ಇವರುಗಳು ವಿದ್ಯಾರ್ಥಿಗಳಿಗೆ ಕಾಲಾವಕಾಶದೊಂದಿಗೆ ಬಾಕಿ ಇರುವ ಎಲ್ಲಾ ಸೆಮಿಸ್ಟರ್‌ಗಳ ಪರೀಕ್ಷೆ ನಡೆಸಿದರೆ ಅನುಕೂಲವಾಗುತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ನಿರ್ಣಯ : ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿದ ವಿದ್ಯಾವಿಷಯಕ ಸಭೆಯು 2019-2020ನೇ ಸಾಲಿನ ವಿದ್ಯಾರ್ಥಿಗಳ ಬಾಕಿ ಇರುವ ದೂರ ಶಿಕ್ಷಣದ ಎಲ್ಲಾ ಪರೀಕ್ಷೆಗಳಿಗೆ ಕೂಡಲೇ ವೇಳಾಪಟ್ಟಿ ಪ್ರಕಟಿಸಿ ಪರೀಕ್ಷೆಗಳನ್ನು ನಡೆಸಲು ನಿರ್ಣಯಿಸಿತು.

## ಪ್ರಾಧಿಕಾರಗಳ ವಿಭಾಗ

2022:ಎಸಿ-1.08 : "DRAFT STATUTES TO SUPPLEMENT PROVISIONS FOR THE PROMOTION OF PROFESSOR (ACADEMIC LEVEL 14) TO SENIOR PROFESSOR (ACADEMIC LEVEL 15) IN THE "STATUTES RELATING TO DIRECT RECRUITMENT AND CAREER ADVANCEMENT SCHEME AND MISCELLANEOUS PROVISIONS TO IMPLEMENT THE REVISED UGC PAY SCALES TO TEACHERS, LIBRARIAN AND EQUIVALENT CADRE PERSONNEL OF KUVEMPU UNIVERSITY 2020".

ಚರ್ಚೆ : ಈ ಬಗ್ಗೆ ಚರ್ಚೆಯಲ್ಲಿ ಡಾ. ಎಸ್.ಡಿ ವಿರೂಪಾಕ್ಷ ಹಾಗೂ ಶ್ರೀ ಆರ್.ಹೆಚ್ ವಾಲ್ಮೀಕಿ ಇವರು ಸದರಿ ಪರಿನಿಯಮದಲ್ಲಿ ದೈಹಿಕ ಶಿಕ್ಷಣ ಅಧ್ಯಾಪಕರು ಹಾಗೂ ಗ್ರಂಥಾಲಯದ ಅಧಿಕಾರಿಗಳಿಗೂ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡುವ ಕುರಿತು ಅಂಶಗಳನ್ನು ಸೇರ್ಪಡೆಗೊಳಿಸಿಬೇಕೆಂದು ಕೋರಿದರು.

ನಿರ್ಣಯ : ಚರ್ಚೆಯ ನಂತರ ಈ ಕುರಿತು ಮುಂದಿನ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ನಿರ್ಣಯಿಸಲಾಯಿತು ಉಳಿದಂತೆ ಪರಿನಿಯಮವನ್ನು ಸಭೆಯು ಅನುಮೋದಿಸಿತು.

2022:ಎಸಿ-1.09: DRAFT STATUTE RELATING TO THE ESTABLISHMENT OF CENTRE FOR ONLINE EDUCATION (COE).

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.10 : DRAFT STATUTE GOVERNING THE ESTABLISHMENT OF MAHAKAVI VALMIKI STUDY CENTRE AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.11 : DRAFT STATUTE GOVERNING THE ESTABLISHMENT OF RASHTRA KAVI KUVEMPU STUDY CENTRE AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.12 : DRAFT STATUTE GOVERNING THE ESTABLISHMENT OF THE CENTRE FOR GANDHIAN STUDIES AND RESEARCH AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.13 : DRAFT STATUTE GOVERNING THE ESTABLISHMENT OF PROFESSOR B. KRISHNAPPA STUDY CHAIR AT KUVEMPU UNIVERSITY

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.14 : DRAFT STATUTE GOVERNING THE ESTABLISHMENT OF ALLAMA PRABHU STUDY CHAIR AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.15 : DRAFT STATUTE GOVERNING THE ESTABLISHMENT OF KELADI RAANI CHANNAMMA STUDY CHAIR AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.16 : DRAFT STATUTE GOVERNING THE ESTABLISHMENT OF PADMABHUSHAN Dr. RAJKUMAR STUDY CHAIR AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.17 : DRAFT STATUTE GOVERNING THE ESTABLISHMENT OF SHARANE AKKA MAHADEVI STUDY CHAIR AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.18 : STATUTE GOVERNING THE ESTABLISHMENT OF SRIMAD RAMBHAPURI SRI RENUKAACHARYA STUDY CHAIR AT KUVEMPU UNIVERSITY.

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

2022:ಎಸಿ-1.19 : "DRAFT STATUTES RELATING TO UP-GRADATION OF TWO JUNIOR COMPUTER PROGRAMMER POSTS PERSONAL TO THE INCUBMENT EMPLOYEES OF KUVEMPU UNIVERSITY".

ನಿರ್ಣಯ : ಚರ್ಚೆಯ ನಂತರ ಅನುಮೋದಿಸಲಾಯಿತು.

## ಕಾಲೇಜು ಅಭಿವೃದ್ಧಿ ವಿಭಾಗ

2022:ಎಸಿ-1.20 : ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021-22ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

ಚರ್ಚೆ : ಈ ಬಗ್ಗೆ ಸಭೆಯಲ್ಲಿ ಸ್ಥಳ ಪರಿವೀಕ್ಷಣೆ ಮಾಡುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ನಿರ್ಣಯ : ಚರ್ಚೆಯ ನಂತರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಬ್ಬೂರು ಮಹಾವಿದ್ಯಾಲಯ ಈ ಕಾಲೇಜಿನ 2021-22ನೇ ಸಾಲಿನ ಸ್ಥಳೀಯ ತಪಾಸಣಾ ವರದಿಯನ್ನು ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

2022:ಎಸಿ-1.21 : "ಅಮಿತ್‌ರಾಜ್ ಪಿ. ಜಿಂಗಾಡೆ S/o ಹೆಚ್.ಕೆ. ವಿಜಯಕುಮಾರಿ ಮೆಮೋರಿಯಲ್ ಗೋಲ್ಡ್ ಮೆಡಲ್" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.22 : "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.23 : "ಲೇಟ್ ಎಸ್.ಡಿ. ಪುಷ್ಪ, ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.24 : **"ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜು ಸಮಾಜಶಾಸ್ತ್ರ ಅಧ್ಯಾಪಕರ ಸಂಘ, ಶಿವಮೊಗ್ಗ"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.25 : **"Desheeya Vidyashala Samithi (R), Shimogga. Platinum Jubiee"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.26 : **"Late Smt. MALLAIGEMMMA and Late Shri H.S. SIDDALINGAPPA, Rtd. School Head Master, Hosadurga(Tq), Chitradurga(Dist)"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.27 : ವಿಶ್ವವಿದ್ಯಾಲಯದ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ ಡಿಪ್ಲೋಮಾ ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಗಳನ್ನು ಪರಿಚಲಿಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.28 : ವಿಶ್ವವಿದ್ಯಾಲಯದ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ (ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸ್ ಹೊರತುಪಡಿಸಿ) ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಗಳನ್ನು ಪರಿಚಲಿಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ-1.29 : ವಿಶ್ವವಿದ್ಯಾಲಯದ ಎಂ.ಬಿ.ಎ ಪದವಿಯ 2021-22ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ–1.30 : ವಿಶ್ವವಿದ್ಯಾಲಯದ ಬಿ.ಪಿ.ಇಡಿ. ಪದವಿಯ 2021–22ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ–1.31 : ವಿಶ್ವವಿದ್ಯಾಲಯದ ಪಿ.ಜಿ ಡಿಪ್ಲೋಮಾ ಇನ್ ಯೋಗ ಪದವಿಯ 2021–22ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

2022:ಎಸಿ–1.32 : 2021–22ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಪದವಿಯ ಶೈಕ್ಷಣಿಕ ವೇಳಾಪಟ್ಟಿ ಪರಿಚಲಿಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ ಸಭೆಯು ಅನುಮೋದನೆ ನೀಡಿತು.

## ಹಣಕಾಸು ವಿಭಾಗ

2022:ಎಸಿ–1.33 : 2022–23ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆ ಕುರಿತು.

ಚರ್ಚೆ : ಕುಲಸಚಿವರು 2022–23ನೇ ಆರ್ಥಿಕ ಸಾಲಿನ ಅಂದಾಜು ಆಯವ್ಯಯವನ್ನು ಚರ್ಚೆ ಮತ್ತು ಅನುಮೋದನೆಗಾಗಿ ಸಭೆಗೆ ಮಂಡಿಸಲಾಗಿದೆ ಎಂದು ಸಭೆಗೆ ಹೇಳಿದರು. ಹಾಗೂ ಆಯವ್ಯಯ ಅಂದಾಜು ಕುರಿತು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು.

ನಿರ್ಣಯ : ಸಭೆಯು ನೀಡಿದ ಸಲಹೆ ಸೂಚನೆಗಳನ್ವಯ ಹಣಕಾಸು ಆಯವ್ಯಯದಲ್ಲಿ ಕೆಲವೊಂದು ಮಾರ್ಪಾಡು ಮಾಡಿರುವುದನ್ನು ಸಭೆಯು ಗಮನಿಸಿ, 2022–23ನೇ ಆರ್ಥಿಕ ಸಾಲಿನ ತಿದ್ದುಪಡಿ ಮಾಡಲಾದ ಅಂದಾಜು ಆಯವ್ಯಯವನ್ನು ಸಭೆಯು ಅನುಮೋದಿಸಿತು.

2022:ಎಸಿ–1.34 : 2020–21ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು

ಚರ್ಚೆ : 2020–21ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. ಚರ್ಚೆಯಲ್ಲಿ ಪಾಲ್ಗೊಂಡ ಡಾ॥ ವಾಲ್ಮೀಕಿ ಆರ್. ಹೆಚ್ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಈ ಆರ್ಥಿಕ ವರ್ಷದಲ್ಲಿ ಪುಸ್ತಕಗಳ ಖರೀದಿಗಾಗಿ ಹೆಚ್ಚಿನ ಅನುದಾನವನ್ನು ಒದಗಿಸಬೇಕೆಂದು ಈ ಮೂಲಕ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಹಾಗೂ ಸಂಶೋಧನೆಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಇದಕ್ಕೆ ಸದಸ್ಯರಾದ ಶ್ರೀ ರಾಮಚಂದ್ರ ದೇವರ ಹೆಗಡೆ ಇವರು ಸಹ ಧ್ವನಿಗೂಡಿಸಿದರು.

ನಿರ್ಣಯ : ಸುದೀರ್ಘ ಚರ್ಚೆಯ ನಂತರ 2020–21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕವನ್ನು ಮರು ಪರಿಶೀಲಿಸಲು ಸಭೆಯು ಸೂಚಿಸಲಾಯಿತು.

2022:ಎಸಿ–1.35: ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆ ಕುರಿತು ಸಹ್ಯಾದ್ರಿ ಕಾಲೇಜಿನ ಆವರಣದ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ – ಬೆಂಗಳೂರು ಇವರಿಗೆ ಹಸ್ತಾಂತರಿಸುವ ಬಗ್ಗೆ.

ಚರ್ಚೆ : ಈ ಕುರಿತು ಮಾನ್ಯ ಕುಲಸಚಿವರು ಸಭೆಗೆ ವಿವರವಾದ ಮಾಹಿತಿಯನ್ನು ಮಂಡಿಸಿದರು.

ನಿರ್ಣಯ: ಈ ಕುರಿತು ಚರ್ಚೆಯ ನಂತರ ಸರ್ಕಾರದ ಆದೇಶ ಮತ್ತು ಅನುಮೋದನೆಯನ್ವಯ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

2022:ಎಸಿ–1.36: **2021–22ನೇ ಸಾಲಿಗೆ ಆರಂಭಿಸಿರುವ ಎಂ.ಎಸ್ಸಿ ಆಹಾರ ತಂತ್ರಜ್ಞಾನ M.Sc Food Technology ಕೋರ್ಸ್‌ನ ಪಠ್ಯಕ್ರಮ ಕುರಿತು.**

ಚರ್ಚೆ: ವಿಶ್ವವಿದ್ಯಾನಿಲಯದಲ್ಲಿ 2021–22ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ಎಂ.ಎಸ್ಸಿ ಆಹಾರ ತಂತ್ರಜ್ಞಾನ (M.Sc Food Technology) ಕೋರ್ಸ್‌ಗೆ ಈಗಾಗಲೇ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ಸದ್ಯದಲ್ಲೇ ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುತ್ತಿರುವ ಹಿನ್ನಲೆಯಲ್ಲಿ, ಈ ಕೋರ್ಸ್‌ನ ಪಠ್ಯಕ್ರಮವನ್ನು ಸಂಬಂಧಿಸಿದ ಸ್ನಾತಕೋತ್ತರ ಅಧ್ಯಯನ ಮಂಡಳಿಯು ಸಿದ್ದಪಡಿಸಿದ್ದು, ಇದನ್ನು ಅನುಮೋದಿಸಬೇಕೆಂದು ಸಭೆಗೆ ಕೋರಿದರು.

ನಿರ್ಣಯ : ಚರ್ಚೆಯ ನಂತರ ಎಂ.ಎಸ್ಸಿ ಆಹಾರ ತಂತ್ರಜ್ಞಾನ (M.Sc Food Technology) ಕೋರ್ಸ್‌ನ ಪಠ್ಯಕ್ರಮವನ್ನು ಸಭೆಯು ಅನುಮೋದಿಸಿತು.

2022:ಎಸಿ–1.37: ಇಂದಿರಾ ಗಾಂಧಿ ರೂರಲ್ ಓಪನ್ ಸ್ಕೂಲಿಂಗ್‌ನಿಂದ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಕೋರ್ಸಿಗೆ ಪ್ರವೇಶಾವಕಾಶ ನೀಡುವ ಕುರಿತು

ಚರ್ಚೆ : ಇಂದಿರಾ ಗಾಂಧಿ ರೂರಲ್ ಓಪನ್ ಸ್ಕೂಲಿಂಗ್ ನಿಂದ 10+2 (12th Std) ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಪದವಿ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಬಗ್ಗೆ ಸಭೆಯಲ್ಲಿ ಮಾನ್ಯ ಕುಲಸಚಿವರು ವಿಷಯವನ್ನು ಮಂಡಿಸಿದರು.

ನಿರ್ಣಯ : ಚರ್ಚೆಯ ನಂತರ ಇಂದಿರಾ ಗಾಂಧಿ ರೂರಲ್ ಓಪನ್ ಸ್ಕೂಲಿಂಗ್, ಹುಬ್ಬಳ್ಳಿ, ಖಾಸಗಿ ಸಂಸ್ಥೆಯಾಗಿದ್ದು, ಈ ಸಂಸ್ಥೆಯು Council of Boards of Schools Education in India ಇದರ ಸದಸ್ಯತ್ವವನ್ನು ಹೊಂದುವುದು ಕಡ್ಡಾಯವಾಗಿದ್ದು, ಸದಸ್ಯತ್ವವನ್ನು ಪಡೆಯದೆ ಇರುವುದರಿಂದ ಸದರಿ ಸಂಸ್ಥೆಯಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಪದವಿ ಕೋರ್ಸ್‌ಗಳಿಗೆ ಪ್ರವೇಶ ನೀಡಬಾರದೆಂದು ಸಭೆಯು ನಿರ್ಣಯಿಸಿತು.

2022:ಎಸಿ-1.38 : **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು ಹಾಗೂ ಇತರೆ ವಿಷಯಗಳು**

ಚರ್ಚೆ: 1 ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ Post Doctoral Research ಕಾರ್ಯಕ್ರಮದ ಅಡಿಯಲ್ಲಿ ಒಂದು ವರ್ಷದ ಸಂಶೋಧನೆ ಕೈಗೊಳ್ಳುವ ಅಭ್ಯರ್ಥಿಗಳಿಗೆ Post Doctoral Research ನಿಯಮಾವಳಿಯಲ್ಲಿ ಅಭ್ಯರ್ಥಿಗಳು ಅರ್ಧವಾರ್ಷಿಕ ಪ್ರಗತಿ ವರದಿಯ ಸಲ್ಲಿಕೆ ಶುಲ್ಕವನ್ನು ಆರು ತಿಂಗಳಿಗೆ ಒಂದರಂತೆ ರೂ.5000+5000 ಸೇರಿ ಒಟ್ಟು ರೂ. 10000/- ಗಳನ್ನು ನಿಗದಿಪಡಿಸಿದ್ದು, ಇದು Post Doctoral Researchಅಡಿಯಲ್ಲಿ ಸಂಶೋಧನೆ ಕೈಗೊಳ್ಳುವ ಅಭ್ಯರ್ಥಿಗಳಿಗೆ ಹೊರೆಯಾಗುವುದರಿಂದ, ಸದರಿ ಶುಲ್ಕವನ್ನು ವರ್ಷಕ್ಕೆ ಒಂದು ಬಾರಿ ರೂ.5000/- ಗಳಿಗೆ ನಿಗದಿಪಡಿಸಲು ಕೋರಿದರು.

ನಿರ್ಣಯ : ಈ ಬಗ್ಗೆ ಮಾನ್ಯ ಕುಲಸಚಿವರು ನಿಯಮಾನುಸಾರ ಕ್ರಮ ಕೈಗೊಳ್ಳುವುದು ಎಂದು ಸಭೆ ನಿರ್ಣಯಿಸಿತು.

ಚರ್ಚೆ: 2 ಸದಸ್ಯರಾದ ಪ್ರೊ.ರಿಯಾಜ್ ಮಹಮೂದ್‌ರವರು ಮಾತನಾಡಿ ಎಂ.ಎಸ್ಸಿ ಮನಶಾಸ್ತ್ರ (M.Sc Psychology ) ಕೋರ್ಸ್‌ಗೆ ಸಂಬಂಧಿಸಿದಂತೆ, ಶಿಕ್ಷಣ ನಿಕಾಯದಡಿ ಶಿಕ್ಷಣ ವಿಭಾಗದ ಪ್ರಾಧ್ಯಾಪಕರ ಅಧ್ಯಕ್ಷತೆಯಲ್ಲಿ ಅಧ್ಯಯನ ಮಂಡಳಿ ರಚಿಸಲಾಗಿದ್ದು ಸದರಿ ಕೋರ್ಸ್ ವಿಜ್ಞಾನ ನಿಕಾಯದಡಿಯಲ್ಲಿ ಬರುವುದರಿಂದ ಈ ಕುರಿತು ವಿಜ್ಞಾನ ನಿಕಾಯದಡಿ ಪ್ರತ್ಯೇಕ ಅಧ್ಯಯನ ಮಂಡಳಿ ರಚಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

ನಿರ್ಣಯ: ಈ ಬಗ್ಗೆ ಮಾನ್ಯ ಕುಲಸಚಿವರು ನಿಯಮಾನುಸಾರ ಕ್ರಮ ಕೈಗೊಳ್ಳುವುದು ಎಂದು ಸಭೆಯು ನಿರ್ಣಯಿಸಿತು.

ಚರ್ಚೆ: 3 ಹೊಸ ಕೋರ್ಸ್‌ಗಳಾದ (ಬಿ.ಎಸ್ಸಿ ಶ್ರವಣ ಶಾಸ್ತ್ರ ಮತ್ತು ಭಾಷಾ ವಿಭಾಗ) **B.Sc in Audiology & Speech Language Department** School of Engineering, **Advanced Learning Centre, Incubation Centre, PG-Diploma in GST & Industrial Accounting** ಮುಂತಾದ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸುವಂತೆ ಕುಲಸಚಿವ(ಪರೀಕ್ಷಾಂಗ)ರವರು ಹಾಗೂ ಸದಸ್ಯರಾದ ಶ್ರೀ ರಮೇಶ್ ಹೆಗಡೆ ಇವರು ಸಲಹೆ ನೀಡಿದರು.

ನಿರ್ಣಯ: **ಸುಧೀರ್ಘ ಚರ್ಚೆಯ ನಂತರ ಸಂಬಂಧಪಟ್ಟ ವಿಭಾಗಗಳಿಂದ ಸದರಿ ಕೋರ್ಸುಗಳ ಕುರಿತು ವರದಿ ಪಡೆದು, ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಿ ಕುಲಸಚಿವರು ಹಾಗೂ ಕುಲಸಚಿವರು(ಪರೀಕ್ಷಾಂಗ)ರವರು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆಯು ತಿಳಿಸಿತು.**

ಚರ್ಚೆ: 4 ವಿಶ್ವವಿದ್ಯಾಲಯದ ಕೆಲವೊಂದು ವಿಭಾಗಗಳಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುವುದು ಹಾಗೂ ಕೆಲಸದ work load (Practical Batches) ಹೆಚ್ಚಾಗಿ ನಮೂದಿಸಿರುವುದನ್ನು ಕಂಡುಬಂದಿರುತ್ತದೆ. ಕೆಲವು ಹಿರಿಯ ಪ್ರಾಧ್ಯಾಪಕರು, ಕೆಲವೊಂದು ವಿಭಾಗಗಳಲ್ಲಿ, ತರಗತಿಗಳನ್ನು ತೆಗೆದುಕೊಳ್ಳುತ್ತಿಲ್ಲವಾದ್ದರಿಂದ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ಅಚ್ಚರಿಯ ಭೇಟಿ (Surprise Visit) ನೀಡಿ ವಿಭಾಗಗಳನ್ನು ಪರಿಶೀಲಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಇದರಿಂದ ಹೆಚ್ಚಿನ ಅತಿಥಿ ಉಪನ್ಯಾಸಕರು ಇರುವ ವಿಭಾಗಗಳಲ್ಲಿ ಕಡಿಮೆ ಮಾಡಬೇಕೆಂದು ಪ್ರೊ. ಆರ್ತೋಜಬ ನಾಯಕ. ವೈ ರವರು ಸಲಹೆ ನೀಡಿದರು. ಹಾಗೂ ಹಣಕಾಸಿನ ಕೊರತೆಯು ಸರಿದೂಗಿಸಬಹುದೆಂದು ವಿಷರಿಸಿದರು.

ನಿರ್ಣಯ: ಈ ಬಗ್ಗೆ ಸಭೆಯು ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಭೆಯು ಅನುಮತಿ ನೀಡಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ, ಮಾನ್ಯ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದರು.

ಕುಲಸಚಿವರು | ಸಹಿ/-
ಕುಲಸಚಿವರು | ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451